ಓ ಎಸ್ ನಂಃ 152/2020
ಪಿ. ಡಬ್ಲ್ಯೂ-1

**(ಮಧ್ಯಂತರ ಅರ್ಜಿ ನಂ.11 ರ ಮೇಲೆ ಆದ ಆದೇಶದ ಮೇರೆಗೆ ಇಂದು ದಿನಾಂಕ 31-08-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಎಮ್ ಟಿ ವಕೀಲರಿಂದ**

ನಾನು ಪ್ರತಿವಾಯೊಂದಿಗೆ ನೋಂದಾಯಿತ ಲೀಜ್ ಅಗ್ರಿಮೆಂಟ ಮಾಡಿಕೊಂಡಿದ್ದೇನೆ. ನಿಪಿ.2 ನ್ನು ಮಾಡಿಕೊಂಡ ಒಂದುವರೆ ಒಳಗಾಗಿ ಹೋಟೆಲ ನಡೆಸಲು ನಾನು ಲೈಸನ್ಸ ಪಡೆದುಕೊಂಡಿರುತ್ತೇನೆ. ನಿಪಿ.2 ರಂತೆ ರೂ.2,00,000/- ಠೇವಣಿ ಇಟ್ಟಿದ್ದೇನೆ ಮತ್ತು ಪ್ರತಿತಿಂಗಳು ಬಾಡಿಗೆ ರೂ.45,000/- ಕೊಡುತ್ತೇನೆ ಅಂತಾ ಒಪ್ಪಿಕೊಂಡಿರುತ್ತೇನೆ. ಪ್ರತಿವಾದಿ ತನ್ನ ಕಟ್ಟಡದ ಉಳಿದ ಕೆಲಸವನ್ನು 2 ತಿಂಗಳ ಒಳಗಾಗಿ ಮಾಡಿಕೊಡಬೇಕಾಗಿತ್ತು ಆದರೆ ಆತ ಮಾಡಿಕೊಟ್ಟಿಲ್ಲ. ನಿಪಿ.2 ರಂತೆ lease deed ಆದ ಮೇಲೆ ಲಾಕ್ ಡೌನ ಆಗಿದೆ ಎಂದರೆ ಸರಿಯಲ್ಲ.

ಅಗಸ್ಟ -2020 ರಲ್ಲಿ ಪ್ರತಿವಾದಿ ನನಗೆ ಬಾಡಿಗೆ ಕೊಡುವಂತೆ ಕೇಳಿದ್ದ ಎಂದರೆ ಸರಿ. ಆದರೆ ಪ್ರತಿವಾದಿ ಕಟ್ಟಡದ ಉಳಿದ ಕೆಲಸ ಮಾಡದೇ ಇಲ್ಲ ಮತ್ತು ಕಟ್ಟಡದ ಸ್ವಾಧೀನತೆ ಕೊಡದೆ ಇರುವುದರಿಂದ ನಾನು ಬಾಡಿಗೆ ಕೊಟ್ಟಿಲ್ಲ. ಪ್ರತಿವಾದಿ ನನ್ನ ಜೊತೆ ಬಾಡಿಗೆ ಒಪ್ಪಂದ ಮಾಡಿಕೊಂಡಿದ್ದರೂ ಸಹಿತ ಬೇರೆಯವರಿಗೆ ಬಾಡಿಗೆ ಕೊಡುವ ತಜವಿಜಿಯಲ್ಲಿದ್ದಾನೆ ಅಂತಾ ಮಾಹಿತಿ ಬಂದಿದ್ದರಿಂದ ನಾನು ಅವನಿಗೆ ಲೀಗಲ್ ನೋಟಿಸ್ ಕೊಟ್ಟಿದ್ದೇನೆ. ಈ ನೋಟಿಸ್ ಕೊಡುವ ವ್ಯವಹಾರ ಅಗಸ್ಟ-2020 ರಲ್ಲಿ ಆಗಿದೆ.

ಓ ಎಸ್ ನಂಃ 152/2020
ಪಿ. ಡಬ್ಲ್ಯೂ-1

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.